# ಪ್ರಾರ್ಥನೆ

( ಸ್ವಾಮಿ ವಿವೇಕಾನಂದ ವಿರಚಿತ ಅಂಬಾಸ್ತೋತ್ರ )

ಕಾ ತ್ವಂ ಶುಭೇ ಶಿವಕರೇ ಸುಖದುಃಖಹಸ್ತೇ
ಆಘೂರ್ಣಿತಂ ಭವಜಲಂ ಪ್ರಬಲೋರ್ಮಿಭಂಗೈಃ |
ಶಾಂತಿಂ ವಿಧಾತುಮಿಹ ಕಿಂ ಬಹುಧಾ ವಿಭಗ್ನಾಂ
ಮಾತಃ ಪ್ರಯತ್ನಪರಮಾಸಿ ಸದೈವ ವಿಶ್ವೇ ||

ಮಂಗಳರೂಪಿಣಿಯೇ, ಶುಭದಾತೆ, ಸುಖದುಃಖಗಳನ್ನು ಕೈಯಲ್ಲಿ ಧರಿಸಿರುವವಳೇ, ಎಲೈ ತಾಯೇ, ನೀನಾರಮ್ಮ ? ಸಂಸಾರಸಾಗರದ ಜಲವು ಪ್ರಬಲವಾದ ಅಲೆಗಳ ಏರಿಳಿತಗಳಿಂದ ಕ್ಷೋಭಿತವಾಗಿ ಸುಳಿಗಳನ್ನು ಹೊಂದಿದೆ. ಹೇ ವಿಶ್ವೇಶ್ವರೀ,ನೀನು ಯಾವಾಗಲೂ ಪ್ರಯತ್ನಪಡುತ್ತಿರುವುದು ಈ ಭವಸಾಗರದಲ್ಲಿ ಶಾಂತಿಯನ್ನು ತರಲೆಂದೇನು?

ಸಂಪಾದಯತ್ಯವಿರತಂ ತ್ವವಿರಾಮವೃತ್ತಾ
ಯಾ ವೈ ಸ್ಥಿತಾ ಕೃತಫಲಂ ತ್ವಕೃತಸ್ಯ ನೇತ್ರೀ |
ಸಾ ಮೇ ಭವತ್ವನುದಿನಂ ವರದಾ ಭವಾನೀ
ಜಾನಾಮ್ಯಹಂ ಧ್ರುವಮಿದಂ ಧೃತಕರ್ಮಪಾಶಾ ||

ಯಾವ ಮಾತೆಯು ವಿರಾಮವಿಲ್ಲದೆ ಅನವರತವೂ ದುಡಿದು ಜೀವಿಗಳಿಗೆ ಪ್ರಾರಬ್ಧಕರ್ಮಗಳ ಫಲವನ್ನು ನೀಡುತ್ತಿರುವಳಲ್ಲದೆ ಅವರನ್ನು ಈಗ ಮತ್ತು ಮುಂದೆ ಮಾಡಬೇಕಾದ ಕರ್ಮಗಳೆಡೆಗೆ ಒಯ್ಯುತ್ತಿರುವಳೋ, ಅಂತಹ ಭವಾನಿಯು ಅನುದಿನವೂ ನನ್ನ ಇಚ್ಛೆಗಳನ್ನು ಪೂರೈಸಲಿ. ಕರ್ಮಪಾಶವನ್ನು ಹಿಡಿದಿರುವವಳು ಅವಳೇ ಎಂದು ನನಗೆ ಖಂಡಿತವಾಗಿ ಗೊತ್ತಾಗಿಬಿಟ್ಟಿದೆ.

ಕೋ ವಾ ಧರ್ಮ ಕಿಮಕೃತಂ ಕಃ ಕಪಾಲ ಲೇಖಃ
ಕಿಂ ವಾಽದೃಷ್ಟಂ ಫಲಮಿಹಾಸ್ತಿ ಹಿ ಯಾಂ ವಿನಾ ಭೋಃ |
ಇಚ್ಛಾಪಾಶೈರ್ನಿಯಮಿತಾ ನಿಯಮಾಃ ಸ್ವತಂತ್ರೈಃ
ಯಸ್ಯಾ ನೇತ್ರೀ ಭವತು ಸಾ ಶರಣಂ ಮಮಾದ್ಯ ||

ಎಲೈ ಜೀವಿಗಳೇ, ಭವಾನಿಯನ್ನು ಬಿಟ್ಟು ಯಾವ ಧರ್ಮ , ಕರ್ಮ, ಹಣೆಬರಹ, ಅದೃಷ್ಟಫಲಗಳು ತಾನೇ ಇರಲು ಸಾಧ್ಯ? ಸ್ವತಂತ್ರಳಾದ ಆ ಮಾತೆಯ ಇಚ್ಛಾಪಾಶದಲ್ಲಿಯೇ ಎಲ್ಲ ನಿಯಮಗಳೂ ಕಟ್ಟಲ್ಪಟ್ಟಿವೆ. ಈ ಜಗದ ಪ್ರಥಮ ಮಾರ್ಗದರ್ಶಿಕಿಯಾದ ಆ ಭವಾನಿಯೇ ನನ್ನ ರಕ್ಷಕಳಾಗಿ ಇರಲಿ.

ಸಂತಾನಯಂತಿ ಜಲಧಿಂ ಜನಿಮೃತ್ಯುಜಾಲಂ
ಸಂಭಾವಯಂತ್ಯವಿಕೃತಂ ವಿಕೃತಂ ವಿಭಗ್ನಮ್ |
ಯಸ್ಯಾ ವಿಭೂತಯ ಇಹಾಮಿತಶಕ್ತಿಪಾಲಾಃ
ನಾಶ್ರಿತ್ಯ ತಾಂ ವದ ಕುತಃ ಶರಣಂ ವ್ರಜಾಮಃ ||

ತಾಯೆ, ನಿನ್ನ ಅಮಿತ ಶಕ್ತಿಯುಕ್ತ ವಿಭೂತಿಗಳೇ ಜನನ ಮರಣ ಜಾಲಗಳುಳ್ಳ ಈ ಭವಸಾಗರವನ್ನು ಉಕ್ಕಿಸುತ್ತಿರುವುದು, ಅವಿಕೃತವಾದ ಪರವಸ್ತುವನ್ನು ವಿಕಾರವುಳ್ಳದ್ದನ್ನಾಗಿ ಮಾಡಿರುವುದು, ಜೀವಾತ್ಮಗಳೆಂದು ಒಡೆದು ತಿರುಗಿ ಅವನ್ನು ಪರಮಾತ್ಮನಲ್ಲಿ ಲೀನವನ್ನಾಗಿ ಮಾಡಿರುವುದು. ಅಂತಹ ನಿನ್ನನ್ನು ಆಶ್ರಯಿಸಿದೆ, ಬೇರೆ ಎಲ್ಲಿ ತಾನೆ ನಾವು ರಕ್ಷಣೆಯನ್ನು ಪಡೆಯಬಲ್ಲೆವು ತಾಯಿ?

# ಸೂಕ್ತಿ ಪ್ರಭೆ

ನಮ್ಮೊಳಗೆ ಶಾಂತಿಯನ್ನು ಪಡೆಯಲು ನಾವು ಅಶಕ್ತರಾದರೆ ಅದನ್ನು ಬೇರೆಡೆ ಅರಸುವುದು ಅಪ್ರಯೋಜಕ.

—ಲಾ ರೋಚ್‌ಫೋಕಾಲ್ಡ್ (La Rochefaucauld)

ಮಾಡು ಸರಿಯಿರದ ಮನೆಗೆ ಮಳೆ ನೀರು ಬರುವಂತೆ ಅಪ್ರಬುದ್ಧ ಮನಸ್ಸನ್ನು ಕಾಮ ಪ್ರವೇಶಿಸುವುದು.

—ಬುದ್ಧ

ತುಂಬ ಬುದ್ಧಿವಂತ ವ್ಯಕ್ತಿ ಮತ್ತು ಅತ್ಯಂತ ದಡ್ಡ ಇವರಿಬ್ಬರೂ ತಮ್ಮ ಮನಸ್ಸನ್ನು ಬದಲಾಯಿಸುವುದಿಲ್ಲ.

—ಕನ್‌ಫ್ಯೂಸಿಯಸ್

ಸಂತೋಷವೆಂಬುದು ಸುಗಂಧದ್ರವ್ಯವಿದ್ದಂತೆ. ಅದನ್ನು ಬೇರೆಯವರಿಗೆ ಸಿಂಪಡಿಸುವಾಗ ಅದು ನಿಮಗೂ ತಾಗದೇ ಇರದು.

—ಅನಾಮಿಕ

ನೀವು ಪ್ರೀತಿಸುವ ಕೆಲಸದಲ್ಲೇ ನಿಮ್ಮ ಜೀವನ ಕಾರ್ಯವನ್ನು ಗುರುತಿಸುವುದೇ ನಿಜವಾದ ಯಶಸ್ಸು.

—ಡೇವಿಡ್ ಮ್ಯಾಕ್ಯುಲೋ [David Mccullough]

ಶ್ರದ್ಧೆಯೇ ನನ್ನ ಶಕ್ತಿಯ ಮೂಲ, ದುಃಖವೇ ನನ್ನ ಮಿತ್ರ, ಜ್ಞಾನವೇ ನನ್ನ ಆಯುಧ, ತಾಳ್ಮೆಯೇ ನನ್ನ ಕವಚ ಮತ್ತು ನೀತಿ.

—ಪ್ರವಾದಿ ಮಹಮ್ಮದ್.

ಸತ್ಯಶ್ರಮಾಭ್ಯಾಂ ಸಕಲಾರ್ಥಸಿದ್ಧಿಃ || ಸತ್ಯವಚನ ಮತ್ತು ಪರಿಶ್ರಮ—ಇವುಗಳಿಂದ ಎಲ್ಲ ಕೆಲಸಗಳೂ ಕೈಗೂಡುತ್ತವೆ.

—ಸುಭಾಷಿತ.